ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ವಿಜಾಪುರ ಮತ್ತು ಬಾಗಲಕೋಟೆ ವಿಭಾಗಗಳಿಗೆ ಸಾಕಷ್ಟು ವಾಹನಗಳು ಮತ್ತು ಸಿಬ್ಬಂದಿಯೊಂದನ್ನು ಒದಗಿಸಲಾಗಿದೆ.

ಇ) ಹೌದು.

ಈ) 1) 48 ಹೆಚ್ಚಿಗೆ ಅನುಸೂಚಿಗಳನ್ನು ಮಾರ್ಚ್ 92ರ ವೇಳೆಗೆ ವಿಜಾಪುರ-ಮತ್ತು ಬಾಗಲಕೋಟೆ ವಿಭಾಗಗಳಲ್ಲಿ ಹೆಚ್ಚಿಸಲಾಗುವುದು.

2) 920-93ನೇ ಸಾಲಿನಲ್ಲಿ ಈ ವಿಭಾಗಗಳಿಗೆ 87 ಹೊಸ ವಾಹನಗಳನ್ನು ನೀಡಲು : ಹೆಚ್ಚಿಸಲು ಯೋಜಿಸಲಾಗಿದೆ.

3) ಪ್ರಸ್ತುತ ಕಾರ್ಯಚರಣೆಯಲ್ಲಿ ಸಿಬ್ಬಂದಿ ಕೊರತೆ ಇರುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಪಡಿತರ ಆಹಾರ ಸಾಮಗ್ರಿಗಳ ಪೂರೈಕೆ

238 -ಶ್ರೀ ಎಲ್.ಆರ್. ಶಿವರಾಮೇಗೌಡ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆಯಲ್ಲಿ ಪಡಿತರ ಅಂಗಡಿ ಮೂಲಕ ಪೂರೈಸಲಾದ ಆಹಾರ ಸಾಮಾಗ್ರಿಗಳ ಪ್ರಮಾಣವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಪ್ರತಿ ತಾಲ್ಲೂಕಿನ ರೇಷನ್ ಕಾರ್ಡುಗಳ ಬೇಡಿಕೆಗೆ ಅನುಗುಣವಾಗಿ ಪಡಿತರ ಸಾಮಾಗ್ರಿಗಳು ಪೂರೈಕೆಯಾಗುತ್ತಿದೆಯೇ?

ಇ) ಹಸಿರು ಕಾರ್ಡು ವಿತರಣೆಗೆ ವಿಳಂಬವಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ವಿತರಣೆ ಯಾವಾಗ ಮುಗಿಸಲಾಗುವುದು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ವಿವರಗಳನ್ನು ಅನುಬಂಧ 'ಅ'ನಲ್ಲಿ ಲಗತ್ತಿಸಿದೆ.

ಆ) ಕೇಂದ್ರ ಸರ್ಕಾರವು ಅಲಾಟ್ ಮಾಡುವ ಆಧಾರದ ಮೇಲೆ ಪಡಿತರ ಸಾಮಾಗ್ರಿಗಳನ್ನು ಪೂರೈಸಲಾಗುತ್ತದೆ.

ಇ) ಬಂದಿರುತ್ತವೆ.

ಈ) ಹಸಿರು ಕಾರ್ಡು ಫಲಾನುಭವಿಗಳ ಪುನರ್ ಪರಿಶೀಲನೆ ಕಾರ್ಯ ಈಗಾಗಲೇ ನಡೆಯುತ್ತಿದೆ. ಪರಿಶೀಲನೆ ಕಾರ್ಯ ಮುಗಿದ ಕೂಡಲೇ ಹೊಸ ಪಡಿತರ ಚೀಟಿಗಳನ್ನು ನೀಡಲು ಸರ್ಕಾರ ತೀರ್ಮಾನಿಸಿದೆ.

ಅನುಬಂಧ - ೨

1992ನೇ ಫೆಬ್ರುವರಿ ತಿಂಗಳಿಗೆ ಮಂಡ್ಯ ಜಿಲ್ಲೆಗೆ ಹಂಚಿಕೆ ಮಾಡಿದ ಆಹಾರ ಧಾನ್ಯಗಳ ತಾಲ್ಲೂಕುವಾರು ವಿವರ

ಕ್ರ. ಸಂ	ತಾಲ್ಲೂಕು	ಅಕ್ಕಿ ಮೆ.ಟನ್. ಗಳಲ್ಲಿ	ಗೋಧಿ ಮೆ.ಟನ್. ಗಳಲ್ಲಿ	ಸಕ್ಕರೆ ಕ್ವಿಂಟಾಲ್ ಗಳಲ್ಲಿ	ಸೀ.ಎಣ್ಣೆ ಕೆ.ಎಲ್. ಗಳಲ್ಲಿ
1.	ಮಂಡ್ಯ	324.0	254.0	1729	156
2.	ಮದ್ದೂರು	199.2	229.2	1085	156
3.	ಮಳವಳ್ಳಿ	181.0	210.0	925	146
4.	ಪಾಂಡವಪುರ	113.4	123.4	650	110
5.	ಶ್ರೀರಂಗಪಟ್ಟಣ	133.3	143.3	665	118
6.	ಕೆ.ಆರ್.ಪೇಟೆ	124.7	124.7	790	130
7.	ನಾಗಮಂಗಲ	124.4	124.4	680	130

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿರ್ವಾಹಕರ ನೇಮಕಾತಿ

239 - ಶ್ರೀ ಎಲ್.ಆರ್. ಶಿವರಾಮೇಗೌಡ (ನೆಲಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕ.ರಾ.ರ.ಸಾ. ಸಂಸ್ಥೆಯ ಚಾಲಕ, ನಿರ್ವಾಹಕ ನೇಮಕಾತಿಯಲ್ಲಿ ಆಗಬಹುದಾದ ಲೋಪ ದೋಷಗಳನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

2) ಈ ನೇಮಕಾತಿಯಲ್ಲಿ ಆಗಬಹುದಾದ ಲೋಪದೋಷಗಳನ್ನು ತಡೆಗಟ್ಟಲು ಅರ್ಹತೆ ಮತ್ತು ವಯಸ್ಸನ್ನು ಆಧಾರವಾಗಿಡಲು ಇರುವ ತೊಂದರೆ ಏನು?

3) ಗ್ರಾಮಾಂತರ ಪ್ರದೇಶದಿಂದ ಬರುವ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದನ್ನು ತಪ್ಪಿಸಲು ಹೆಚ್ಚುವರಿ ಅಂಕಗಳನ್ನು ಕೊಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

1) ಈ ಹಿಂದೆ ನಿರ್ವಾಹಕರ ಹುದ್ದೆಗೆ 75 ಅಂಕಗಳ ಲಿಖಿತ ಪರೀಕ್ಷೆ ನಡೆಸಿ ಅದರಲ್ಲಿ ಪಡೆಯುವ ಅಂಕಗಳನ್ನು ಸಂದರ್ಶನಕ್ಕೆ ನಿಗಧಿಪಡಿಸಿದ 25 ಅಂಕಗಳಿಗೆ ಪಡೆಯುವ ಅಂಕಗಳನ್ನು ಕೊಡಿಸಿ ಒಟ್ಟು ಅಂಕಗಳ ಅರ್ಹತಾ ಕ್ರಮದ ಆಧಾರದ ಮೇಲೆ ಹುದ್ದೆಗಳ ಮೀಸಲಾತಿಯನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಲಾಗುತ್ತಿತ್ತು. ಚಾಲಕ ಹುದ್ದೆಗೆ 75 ಅಂಕಗಳ ವೃತ್ತಿ ಪರೀಕ್ಷೆಯನ್ನು 25 ಅಂಕಗಳ ಸಂದರ್ಶನವನ್ನು ನಡೆಸಿ ಒಟ್ಟು ಅಂಕಗಳ ಆಧಾರದ ಮೇಲೆ ಅರ್ಹತಾ ಕ್ರಮದಲ್ಲಿ ಆಯ್ಕೆ ಮಾಡಲಾಗುತ್ತಿತ್ತು. ಈ ಪದ್ಧತಿಯು ಅನೇಕ ಕಡೆಗಳಿಂದ ದೂರು ಬರಲು ಅವಕಾಶವಾದ್ದರಿಂದ ಇದನ್ನು ತಪ್ಪಿಸಲು ಸಂಬಂಧಿಸಿ ನಿಯಮಾವಳಿಯನ್ನು 1991ರಲ್ಲಿ ತಿದ್ದುಪಡಿ ಮಾಡಲಾಯಿತು. ತಿದ್ದುಪಡಿಯಂತೆ ನಿರ್ವಾಹಕ ಹುದ್ದೆಗೆ ನಿಗಧಿತ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಯು ಪಡೆದ ಅಂಕಗಳನ್ನು 75 ಅಂಕಗಳಿಗೆ ಪರಿವರ್ತಿಸಿ ಸಂದರ್ಶನದಲ್ಲಿ 25 ಅಂಕಗಳಿಗೆ ಪಡೆಯುವ ಅಂಕಗಳನ್ನು ಕೂಡಿಸಿ ಒಟ್ಟು ಅಂಕಗಳ ಆಧಾರದ ಮೇಲೆ ಮಾಡಲಾಗುವುದು. ಚಾಲಕ ಹುದ್ದೆಗೆ 50 ಅಂಕಗಳ ವೃತ್ತಿ